SRI M. H. JAYAPARAKASH NARAYAN — I want a clarification from the Government. In the statment they have given that Guruviah belongs to Voddar community. But it is not so. I want to know whether it is true or not.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ಪುನರ್ ವಿವರ್ಸ್ ಮಾಡಿ ಸರಿಯಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಒಳ್ಳೆಯದು. ಇಲ್ಲದಿದ್ದರೆ ಇನ್ನು ಗೊಂದಲಮಯವಾಗುತ್ತದೆ. ಇದನ್ನು ಬೆಳೆಸಕೂಡದು ಯೂನಿವರ್ಸಿಟಿಯಲ್ಲಿ ವೈಸ್‌ಛಾನ್ಸಲರ್ ಇದ್ದಾರೆ ಅವರ ಜೊತೆಯಲ್ಲಿ ಈ ಬಗ್ಗೆ ಮಾತನಾಡಿ ಒಂದು ತಹಬಂದಿಗೆ ತರುವುದಕ್ಕೆ ಅವಕಾಶ ಇದೆ. ಆದ್ದರಿಂದ ಇದನ್ನು ಬೆಳೆಸ ಕೂಡದು, ಮಾನ್ಯ ಮಂತ್ರಿ ಈ ಬಗ್ಗೆ ಸರಿಯಾದ ಹೇಳಿಕೆಯನ್ನು ನೀಡಿ ಸಮಾಧಾನ ಪಡಬೇಕೆಂದು ನಾನು ಮಾನ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

SRI AZEEZ SAIT—(Minister for labour). I have not prepared the statement and I requestd to be pardoned. I will give my statement on the 14th of this month.

MADAM SPEAKER.—We will go to the next item.

†*Re* Report of the fact finding Committee and Hunger Strike by Students of National Institute of Social Scienees, Bangalore.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟು ೧೭ ದಿವಸಗಳಾಯಿತು ಅದು ಇನ್ನೂ ಬರಲಿಲ್ಲ. ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ "the minister may make a brief statement or ask for time to make a statement at a later hour or date" ಎಂದು ಹೇಳಿದೆ.

That is exactly what he has done. There must be some propriety to these rules I gave notice on the 21st of February and to day it is 9th of March. Does it require 17days to prepare a statement? I do not say that he should not take time. Here, the students are on hunger strick. 17 days time has been given and still if the minister is not prepared, I do not know what I should say. I do not wish to say about the efficiency of the minister. I would request the Chair to come to our rescue.

ಶ್ರೀ ಕೋಣಂದೂರು ಲಿಂಗಪ್ಪ.— ವಿಧಾನಸೌದದ ಎದುರಿನಲ್ಲಿ ಆ ವಿದ್ಯಾರ್ಥಿಗಳು ಗುಡಾರ ಹಾಕಿಕೊಂಡು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ಆದರೂ ಮಾನ್ಯ ಮುಂತ್ರಿಗಳು ಈ ಸಂಬಂಧದ ಕಾಲ್‌ಅಟೆನ್‌ಷನ್ ನೋಟೀಸಿಗೆ ಹೇಳಿಕೆ ಕೊಡುವುದಕ್ಕೆ ಇನ್ನೂ ತಯಾರು ಆಗಿಲ್ಲ ಎಂದರೆ ಏನು ಅರ್ಥ? ಆ ವಿದ್ಯಾರ್ಥಿಗಳನ್ನು ಇವರು ನಿರ್ಲಕ್ಷ ಮಾಡಿದ್ದಾರೆ.

SRI AZEEZ SAIT (Minister for labour).—Let there be no apprehension. I would like to make it clear that it is very unfortunate that the students have to be involved in this affa r.

M. S. KRISHNAN.—May I know whether he is making a statement.

SRI AZEEZ SAIT.—I am on my legs.

The Government have decided to take over the institution. I have made this categorical statement in reply to a question in the Legislative Council. Accordingly, I have started processing the issue but unfortunately the Law Department have informed the Government that it requires a general body resolution. So, we have asked the management to get a general body resolution passed. Meanwhile the students are circulating these books as self appointed committee.

(Interruptions)

M. S. KRISHNAN.—He is going into the merits.

(Interruptions)

SRI AZEEZ SAIT.—You can do anything. I am not going to tell anything about it until 14th March 73

ಅಧ್ಯಕ್ಷರು —ಮಾನ್ಯ ಸದಸ್ಯರು ಕೊಟ್ಟಿರತಕ್ಕ ಕಾಲ್‌ಅಟೆನ್‌ಷನ್ ನೋಟೀಸ್ ಅನ್ನು ನಾನು ಅಡ್ಮಿಟ್ ಮಾಡಿದ್ದೇನೆ. ಅದಕ್ಕೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ನಿಳನೇ ತಾರೀಖಿನವರೆಗೂ ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ. ಈ ರೀತಿ ನಾಲ್ಕು ಜನ ಒಟ್ಟಿಗೆ ಎದ್ದುನಿಂತು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ಏನು ಮಾಡುವುದು?

SRI M. S. KRISHNAN.—I would not have got up if the minister had confined himself to the reason for the delay.

I would request the chair to fix up a time-limit for the Ministers.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಕೃಷ್ಣನ್‌ರವರು ಕಳಿಸಿರತಕ್ಕಂತಹ ಕಾಲ್ ಅಟೆನ್‌ಶನ್ ಬಗ್ಗೆ ಮಾನ್ಯ ಮಂತ್ರಿಯವರು ಏನು ಕಾಲ ಬೇಕೆಂದು ಕೇಳಿದ್ದಾರೆ, ಬಹುಶಃ ಅದನ್ನು ಕೊಡಬಹುದು. ಆದರೆ ನಾನು ರೂಲ್ ೩೧೨ ಇದನ್ನು ಪ್ರಸ್ತಾಪ ಮಾಡಬೇಕಾಗಿದೆ. ಇವತ್ತು ಅಲ್ಲಿ ಹೆಣ್ಣು ಮಕ್ಕಳು ಮತ್ತು ಇತರ ವಿದ್ಯಾರ್ಥಿಗಳು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ.

ಅಧ್ಯಕ್ಷರು— ನಾವು ಅಂಥ ನೋಟಿಸ್ ಯಾವುದೂ ರಿಸೀವ್ ಮಾಡಲಿಲ್ಲ.

SRI AZEEZ SAIT.—It is probably intransit.

ಶ್ರೀ ಪಾಟಾಳ್ ನಾಗರಾಜ್.—ಮಂತ್ರಿಯವರು ಏಕೆ ಕಾಲ ಬೇಕೆಂದು ಹೇಳುತ್ತಾರೆ ಅಂದರೆ, ಅದರಲ್ಲಿ ಕೆ. ಕೆ. ಮೂರ್ತಿಯವರ ಅಣ್ಣ ಕೆ. ರಾಮರಾವ್ ಎನ್ನುವವರು ಇದ್ದಾರೆ.

ಅಧ್ಯಕ್ಷರು.—ತಾವು ಸುಮ್ಮನೆ ಈ ಮನೆಯಲ್ಲಿ ಇಲ್ಲಿದವರ ಹೆಸರನ್ನು ಕೇಳಿ ಕರೆಯಬಾರದು.

ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಯವರು ಏನು ಟ್ರಾನ್ಸಿಟ್‌ನಲ್ಲಿ ಇದೆ ಎಂದು ಹೇಳಿದರು ಅದರ ಬಗ್ಗೆ ಹೇಳಂತ್ತೇನೆ. ಇವತ್ತು ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡುತ್ತಿದ್ದಾರೆ.

ಮಂತ್ರಿಯವರು ಇಲ್ಲಿದ್ದಾರೆ ಇನ್ನೂ ೫ ದಿವಸ ಆ ವಿದ್ಯಾರ್ಥಿಗಳು ಉಪವಾಸ ಮಾಡಬೇಕೇ? ಅಥವಾ ತಾವು ಅನುಮತಿ ಕೊಟ್ಟು ಮಂತ್ರಿಗಳು ಆ ಸತ್ಯಾಗ್ರಹವನ್ನು ನಿಲ್ಲಸುವುದಕ್ಕೆ ಏನಾದರೂ ಮಾಡುತ್ತೀರಾ?

SRI AZEEZ SAIT —That is what I was trying to do

ಶ್ರೀ ಎಚ್. ಡಿ. ದೇವೇಗೌಡ—ಮಂತ್ರಿಯವರು ನಿಳನೇ ತಾರೀಕಿನ ವರೆಗೆ ಕಾಲ ಬೇಕೆಂದು ಹೇಳಿ ಅವರ ಹತ್ತಿರ ಇದ್ದ ಒಂದು ಹ್ಯಾಂಡ್ ಬುಕ್ಕನ್ನು ತೋರಿಸಿ ವಿದ್ಯಾರ್ಥಿಗಳು ಇದನ್ನು ಹಂಚಿದ್ದಾರೆ ಎಂದು ಹೇಳಿ, ವಿದ್ಯಾರ್ಥಿಗಳ ಮೇಲೆ ಒಂದು ರೀತಿಯ ಆರೋಪಣೆಯನ್ನು ಮಾಡುವುದಕ್ಕೆ ಹೊರಟಿದ್ದಾರೆ. ೭ನೇ ತಾರೀಕಿನ ಪ್ರಜಾವಾಣಿಯಲ್ಲಿ ನಗರದ ೫ ಜನ ಪ್ರತಿಷ್ಠಿತ ವ್ಯಕ್ತಿಗಳೇ ಈ ಬಂದು ಸಂಸ್ಥೆಯಲ್ಲಿ ನಡೆದಿರತಕ್ಕಂತಹ ಅನ್ಯಾಯದ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಶ್ರೀಮಾನ್ ಕೋದಂಡ ರಾಯರು ಡಿ. ವಿ. ಗುಂಡಪ್ಪನವರು, ಹಾಗೂ ಪ್ರೊಫೆಸರ್ ನಿಕ್ಕಂ, ಕಡಿದಾಳ್ ಮಂಜಪ್ಪನವರು, ಡಿ. ಕುಪುಸ್ವಾಮಿ, ಇತ್ಯಾದಿ ವ್ಯಕ್ತಿಗಳು ಇದನ್ನು ಅತೀ ಜಾಗ್ರತೆಯಾಗಿ ಯೂನಿವರ್ಸಿಟಿಗೆ ವಹಿಸಿಕೊಡ ಬೇಕೆಂದು ಹೇಳಿದ್ದಾರೆ.

ಮಂತ್ರಿಯವರು ಲಾ ಡಿಪಾರ್ಟ್‌ಮೆಂಟ್‌ನವರು ಜನರಲ್ ಬಾಡಿ ರಿಸೊಲ್ಯೂಷನ್ ಆಗಬೇಕೆಂದು ಕೇಳಿದ್ದಾರೆ ಎಂಬುದನ್ನು ಹೇಳುವುದರಲ್ಲಿದ್ದರು. ಈ ಇನ್‌ಸ್ಟಿಟ್ಯೂಟ್ ಬಗ್ಗೆ ನಡೆದಿರತಕ್ಕಂತಹ ಅವ್ಯವಹಾರದ ಬಗ್ಗೆ ಒಂದು ತನಿಖೆಯನ್ನು ಕೇರಳದ ರಿಟೈರ್ಡ್ ಸೆಷಿಲ್ ಮತ್ತು ಆಂಧ್ರ ವಿಶ್ವವಿದ್ಯಾ

ನಿಲಯದ ಕೆ. ವಿ. ರಮಣ ಎಂಬವರು ಮಾಡಿ ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಈ ಸಂಸ್ಥೆಗೆ ಮಾನ್ಯತೆ ಹಿಂತೆಗೆದುಕೊಳ್ಳಬೇಕಾಗುತ್ತದೆ, ಡಾ. ಶ್ರೀಧರ್ ಎಂಬುವರನ್ನು ತೆಗೆದು ಹಾಕಿದ್ದು ತಪ್ಪು, ಆ ವ್ಯಕ್ತಿಗೆ ಅಗೌರವ ಮಾಡಿದ್ದಾರೆ ಇತ್ಯಾದಿ ಹೇಳಿದ್ದಾರೆ. ಅದೇ ಇನ್‌ಸ್ಟಿಟ್ಯೂಟಿನ ಹಣಕಾಸಿನ ಪರಿಸ್ಥಿತಿ ಕೆಟ್ಟಿರುವಾಗ ನೀವು ಒಂದು ತಿಂಗಳಿಗೆ ಒಂದು ರೂಪಾಯಿಯಾದರೂ ಕೊಟ್ಟರೆ ನಾನು ಸೇವೆ ಮಾಡುತ್ತೇನೆ ಎಂದು ಇವರು ಹೇಳಿದ್ದಾರೆ. ಆಗ ನಮ್ಮ ಮುಖ್ಯಮಂತ್ರಿಯವರು ಅದರ ಅಧ್ಯಕ್ಷರಾಗಿದ್ದರು. ಆ ಮೇಲೆ ಅವರನ್ನು ಕಿತ್ತು ಹಾಕಿದ್ದಾರೆ. ಈ ಸ್ಥಾನಕ್ಕೆ ಇದು ದೊಡ್ಡ ಅಗೌರವಾಗಿದೆ, ಅದನ್ನು ಮಾಡಬಾರದಾಗಿತ್ತು.

ಆ ಮೇಲೆ ರೆಕಗ್ನಿಶನ್ ಕಿತ್ತು ಹಾಕಿದರೆ, ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಲ್ಲದೆ ಮೈಸೂರು ರಾಜ್ಯಕ್ಕೆ ದೊಡ್ಡ ಪೆಟ್ಟಾಗುತ್ತದೆ. ಇವರ ಬಗ್ಗೆ ಕೂಡ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಯಾವುದೇ ಒಬ್ಬ ವ್ಯಕ್ತಿಯ ದ್ವೇಶದಿಂದ ಇದನ್ನು ನೋಡಿದರೆ ಬಹಳ ಕಷ್ಟವಾಗುತ್ತದೆ. ಅಲ್ಲದೆ ಶ್ರೀಧರ್‌ರವರು ಕೇವಲ ಶೆಡ್ಯೂಲ್ಡ್ ಕಾಸ್ಟ್‌ಗಳನ್ನು ಕಟ್ಟಿಕೊಂಡು ರಾಜಕೀಯ ಮಾಡುತ್ತಿದ್ದಾರೆ ಎಂದು ಸಹ ಕೆಲವರು ಹೇಳುತ್ತಿದ್ದಾರೆ.

SRI H. M. CHANNABASAPPA (Minister for Public Works and Electricity).—The hon. the Leader of the Opposition will kindly bear with me for a minute. We have to proceed in accordance with the procedures laid down. I do not know what exactly the Leader of the Opposition is saying. If any motion has been sent and if the matter has been referred to Government the Government will be in a position to go through it and make a statement. The motion has not been sent to us. If the Hon'ble Speaker were to permit it, then a discussion will take place.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಈ ಸಭೆಯಲ್ಲಿ ಎತ್ತಿದ್ದಾಗ ನೋಟೀಸ್ ನನಗೆ ಬಂದಿಲ್ಲವೆಂದು ಹೇಳಿದೆ. But the Hon'ble Minister volunteered himself and said "that is what exactly I wanted to say."

SRI AZEEZ SAIT.—The hon. the Leader of the Opposition said that he has sent a notice. I said that probably it is in transit. When the question of fasting of the students was raised, I thought it is right that I should intervene and said.

ಅಧ್ಯಕ್ಷರು.—ನನಗಂತೂ ನೋಟೀಸ್ ಬಂದಿಲ್ಲ. ಮಕ್ಕಳು ಉಪವಾಸ ಮಾಡುತ್ತಿದ್ದಾರೆಂದು ಮೋಷನ್ ಕಳುಹಿಸಬೇಕಾದುದೇನೂ ಇಲ್ಲ ಆದರೆ ಇಲ್ಲಿ ಯಾವ ವಿಷಯವನ್ನು ಪ್ರಸ್ತಾಪಮಾಡುತ್ತಾರೆಂದು ತಿಳಿಸುವುದು ಉಚಿತ. ಸಂಬಂಧಪಟ್ಟ ಮಂತ್ರಿಗಳೂ ಇದ್ದಾರೆ. ಅವರು ಉತ್ತರ ಹೇಳುತ್ತಾರೆ. ಈ ವಿಷಯ ಬಹಳ ಗಹನವಾದ ವಿಷಯ. ಹೆಣ್ಣುಮಕ್ಕಳು ಉಪವಾಸ ಸತ್ಯಾಗ್ರಹ ಕೂಶಿರುವ ಬಗ್ಗೆ ನಗರದ ಗಣ್ಯ ವ್ಯಕ್ತಿಗಳು ಕೊಟ್ಟಿರುವ ಒಂದು ಹೇಳಿಕೆಯೂ ಇದೆ ಇಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ತನಿಖೆಯಾಗಿ ತಜ್ಞರು ತನಿಖೆ ಮಾಡಿದಂಥ ವರದಿ ಕೂಡ ಪ್ರಕಟವಾಗಿದೆ. ಈ ರಿಕಾರ್ಡ್ಸ್ ವಿತ್‌ಡ್ರಾ ಮಾಡಿಕೊಂಡರೆ ಈ ರಾಜ್ಯದಲ್ಲಿ ಒಂದು ದೊಡ್ಡ ಆಘಾತವಾಗುತ್ತದೆ. ಇಂತಹ ಸಂಸ್ಥೆಯನ್ನು ಕಳೆದುಕೊಳ್ಳುವುದು ಸರಿಯಲ್ಲ. ಯೋಗ್ಯವಲ್ಲ. ಶ್ರೀಧರನ್ ಬಗ್ಗೆ ಯಾವುದೋ ಒಂದು ಭಿನ್ನಾಬಿಪ್ರಾಯ ಇಟ್ಟುಕೊಂಡು ಈ ರೀತಿ ಮೋಷನ್ ತರುವುದು ಸರಿಯಲ್ಲ. ಅದು ಈ ಮನೆಯ ವ್ಯವಹಾರವಲ್ಲ. ಐದಾರು ಜನ ವಿದ್ಯಾರ್ಥಿಗಳು ಹೊರಗಡೆ ಈ ರೀತಿ ಉಪವಾಸ ಮಾಡುತ್ತಿದ್ದಾರೆ ಅಷ್ಟೆ ಆದರೆ ಎಲ್ಲಾ ಹುಡುಗರು ಶಾಲೆಗಳಿಗೆ ಹೋಗುತ್ತಿದ್ದಾರೆ ಇಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಉಪವಾಸ, ಸತ್ಯಾಗ್ರಹದಲ್ಲಿ ಪಾಲೊಂಡಿದ್ದಾರೆ ಎಂಬ ವಿಷಯವನ್ನು ಚರ್ಚೆಮಾಡಲು ಈ ಸಭೆಯನ್ನು ಮುಂದಕ್ಕೆ ಹಾಕಿ ಎಂದು ಹೇಳಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್.—ಅವರು ಉಪವಾಸವನ್ನು ನಿಲ್ಲಿಸುವುದಕ್ಕಾಗಿ ಅವರ ಬೇಡಿಕೆಯನ್ನು ಈಡೇರಿಸಬೇಕು.

ಶ್ರೀ ಎಚ್. ಡಿ. ದೇವೇಗೌಡ .—ಒಂದು ವೇಳೆ ಇದನ್ನು ಸರ್ಕಾರ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರೆ ನಾನು ಸರ್ಕಾರದವರನ್ನು ಬಲಾತ್ಕಾರ ಮಾಡುವುದಿಲ್ಲ. ಅದು ತಪ್ಪು ಎಂದು ತಿದ್ದಿಕೊಳ್ಳುವ ಪ ಯತ್ನ ಮಾಡಿದರೆ ಅದು ಸರಿಯೇ ತಪ್ಪೇ ಎಂಬ ಬಗ್ಗೆ ದೇಶದ ಜನ ನಿರ್ಣಯ ತೆಗೆದುಕೊಳ್ಳಬೇಕು. ಎಲ್ಲಿಯವರೆಗೆ ಒಲ ಇರುತ್ತದೋ ಅದು ಏನೇ ತಪ್ಪು ಮಾಡಿದರೂ ಸರಿಯೆಂದು ಸಾಧನೆ ಮಾಡಬೇಕು. ಇದು ಈ ಸಭೆಯಲ್ಲಿ ಮೂರುಸಾರಿ ಚರ್ಚೆಗೆ ಬಂತು. ಮಾನ್ಯ ಶ್ರೀ ಅಜೀಜ್ ಸೇಟ್ ಅವರು ಮತ್ತು ಮಾನ್ಯ ಮಂಖ್ಯಿ ಮಂತ್ರಿಗಳು ಪ ತ್ತು ಈ ಕಡೆ ಇರತಕ್ಕ ಎಲ್ಲಾ ಸದಸ್ಯರು ಸಾಕಷ್ಟು ಅವರ ಎನರ್ಜಿಯನ್ನು ವೇಸ್ಟ್ ಮಾಡಿಕೊಂಡು ಚರ್ಚೆ ಮಾಡಿದ್ದಾರೆ. ಶ್ರೀಧರನ್ ಬಗ್ಗೆ ಸಿ. ಐ. ಏಜೆಂಟ್ ರೆಪೋರ್ಟ್ ಕೂಡ ಇದೆಯೆಂದು ಹೇಳಿದ್ದಾರೆ. ರಿಕಾರ್ಡ್ ಆಗಿದೆ. ಅವನು ಹೇಳಿರುವ ವರದಿಯನ್ನು ತರಿಸಿ ನೋಡಿ. ಅವರು ಎನ್‌ಕ್ವೈರಿ ಮಾಡಿರುವ ವರದಿಯನ್ನೂ ಸಹ ಕೊಟ್ಟಿದ್ದಾರೆ. ಅವರ ಘನತೆಗೆ ಅಗೌರವ ಮಾಡಿದ್ದಾರೆ. ಆ ವ್ಯಕ್ತಿಗೆ ಅಗೌರವ ಮಾಡಿದ್ದಾರೆ. ಅದು ಪತ್ರಿಕೆಗಳಲ್ಲಿಯೂ ಬಂದಿದೆ. ಆದ್ದರಿಂದ ಇದರ ಬಗ್ಗೆ ಹೆಚ್ಚು ಹೇಳುವ ಪರಿಸ್ಥಿತಿ ಇಲ್ಲ ಇನ್ನು ೧೫–೨೦ ದಿವಸಗಳವರೆಗೆ ಉಪವಾಸ ಮಾಡಿ ಏನಾದರೂ ಒಂದು ಕೆಟ್ಟ ಪರಿಣಾಮವಾದರೆ ಅದರ ಫಲವನ್ನು ಅವರೇ ಊಟಮಾಡಲಿ. ಮಾನ್ಯ ಶ್ರೀ ಕೃಷ್ಣನ್ ಅವರ ಕಾಲ್ ಅಟೆನ್‌ಷನ್ ನೋಟೀಸಿಗೆ ಮಂತ್ರಿಗಳು ಉತ್ತರ ಕೊಡುವುದಕ್ಕೆ ಸಂಮಾರು ೧೭ ದಿನಗಳನ್ನು ತೆಗೆದುಕೊಂಡರು. ಆದ್ದರಿಂದ ಇದರ ಬಗ್ಗೆ ಅನಾದರಣೆ ಮಾಡದೇ ಮಂತ್ರಿಗಳು ಸ ಷ್ಟ ಅಭಿಪ್ರಾಯವನ್ನು ಸೂಚಿಸಬೇಕು. ಅವರು ಈ ವಿಚಾರದಲ್ಲಿ ಏನು ಹೇಳುತ್ತಾರೋ ಅದನ್ನು ಕೇಳುವುದಕ್ಕೆ ನಾನು ಒಪ್ಪುತ್ತೇನೆ. ತೀರಾ ತಡೆ ಮಾಡದೆ ಇಂತಹ ಒಂದು ಸಮಸ್ಯೆಯನ್ನು ಬೇಗ ಬಗೆಹರಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

SRI AZEEZ SAIT .—Madam Speaker, I have made known to the House that the Government have decided to take over this Institution and accordingly orders have been passed. But, when it was in the process of taking over, the Law Department felt that a Resolution of the General Body was necessary since the same was required under the Articles of Association of that Institution. Therefore the Management was asked to convey a General Body Meeting and the Management accordingly conveyed the meeting. Hon. members must understand that we are not interested in allowing things to be prolonged. It is an aided Institution to which Government was giving certain grant. It is in the interest of the Institution and as the same is required for our students that the Government is now thinking of taking it over and hand it over to the University. The students did came to me and I convinced them and asked them to allow the Government to finalise the process But, in spite of it they have been agitating. I do not know whether it will be correct on my part to say that some of the political leaders as using these students as a toy in their hands. The students need not be worried and need not be miscarried or mislead Government is at it, and on behalf of the Government I assure this House that the Government is going to take over this Institution after finalising the process. I request the Hon. the Leader of the Opposition and other members interested in the welfare of the students to use their good offices to call off the strike. It is not correct on the part of the students to precipitate matters. There is no politics in this.

ಶ್ರೀ ವಾಟಾಳ್ ನಾಗರಾಜ್ .—ಇದರಲ್ಲಿ ಬರೀ ರಾಜಕೀಯವಿದೆ. ಮಾನ್ಯ ಶ್ರೀ ಕೆ. ಕೆ. ಮೂರ್ತಿ ಯಂಥವರಂತಹ ಪ್ರಭಾವ ವ್ಯಕ್ತಿಗಳು ಇದರಲ್ಲಿ ರಾಜಕೀಯ ಮಾಡುತ್ತಿದಾರೆ.

SRI AZEEZ SAIT .—I am sorry. My friend Sri Vital Nagaraj is I think alergic to Sri Murthy I am not going to be pressurised by any big-shots. Sri Murthy has nothing to do with this Institution.

ಶ್ರೀ ಎಚ್. ಡಿ. ದೇವೇಗೌಡ .—ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರೊಬ್ಬರು ಪ್ರಭಾವ ವ್ಯಕ್ತಿಗಳು. ಅವರ ಸಹೋದರ ಮಾನ್ಯ ಶ್ರೀ ರಾಮರಾವ್ ಅವರೂ ಸಹ ಅವರಷ್ಟೇ ಪ್ರಭಾವ ವ್ಯಕ್ತಿಗಳು.

ಅಧ್ಯಕ್ಷರು .—ಈ ಸಭೆಯಲ್ಲಿ ಇಲ್ಲದೇ ಇರುವವರ ಹೆಸರನ್ನು ಏಕೆ ಹೇಳುತ್ತೀರಿ ?

ಶ್ರೀ ವಾಟಾಳ್ ನಾಗರಾಜ್ .—ಅವರು ಆ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ.

MADAM SPEAKER .—I warn the hon. member not to use such words

ಶ್ರೀ ಎಚ್. ಡಿ. ದೇವೇಗೌಡ .—ಯಾರೇ ಆಗಲಿ ಅವರ ಹೆಸರನ್ನು ಡಿಫೆಂಡ್ ಮಾಡುವುದಕ್ಕೆ ಇಲ್ಲಿ ಮಾತನಾಡುತ್ತಿಲ್ಲ. ಜನರಲ್ಲಾಗಿ ಏನೊ ಮಾತನಾಡುತ್ತಾರೆ. ಅಂದಮೇಲೆ ಆ ರೀತಿಯಾಗಿ ಮಾತನಾಡಬೇಡಿ ಎಂದು ಹೇಳಿದರೆ ಹೇಗೆ ? ಆ ಸಂಸ್ಥೆಗೆ ಯಾರಿಂದ ಅನ್ಯಾಯವಾಗಿದೆಯೋ ಅವರ ಹೆಸರನ್ನು ಈ ಸಭೆಯಲ್ಲಿ ಹೇಳಬೇಕಾದ ಪ್ರಸಂಗ ಬರುತ್ತದೆ.

ಅಧ್ಯಕ್ಷರು .—ಏನು ಅನ್ಯಾಯ, ಎಲ್ಲಿ ಆಗಿದೆಯೆಂಬ ಬಗ್ಗೆ ಈಗಾಗಲೇ ತನಿಖೆ ನಡೆಯುತ್ತಿರುವಾಗ ಈ ರೀತಿಯಾಗಿ ನಿಮ್ಮ ಅಭಿಪ್ರಾಯವನ್ನು ಸೂಚಿಸುವುದು ಸರಿಯಲ್ಲ.

3-00 P.M.

ಸಭೆಯಲ್ಲಿ ಇಲ್ಲದೆ ಇರತಕ್ಕ ಯಾರ ಯಾರ ಹೆಸರನ್ನೂ ಹೇಳುವುದಕ್ಕೆ ಅವಕಾಶವಿಲ್ಲದೆ ? ಅನವಶ್ಯಕವಾಗಿ ಅವರಿಗೆ .....

ಶ್ರೀ ಎಚ್. ಡಿ. ದೇವೆಗೌಡ:—ನಮಗೆ ವ್ಯರ್ಥಾ ವ್ಯಕ್ತಿಗಳ ಹೆಸರನ್ನು ಹೇಳಬೇಕೆಂಬ ಚಟವೇನೂ ಇಲ್ಲ ಕೆ. ಕೆ. ಮೂರ್ತಿ ಅವರ ಹೆಸರನ್ನಾಗಲೀ ಅಥವಾ ಅವರ ತಮ್ಮ ಅವರ ಅಣ್ಣ ಅವರುಗಳ ಹೆಸರನ್ನು ಹೇಳಿ ನಾವು ಇಲ್ಲಿ ಗಳಿಸತಕ್ಕ ಲಾಭವೇನೂ ಇಲ್ಲ..... .....

ಅಧ್ಯಕ್ಷರು:—ನಾನು ಹೇಳುತ್ತಿರುವುದು ಅವರಿಗೆಲ್ಲಾ ಏತಕ್ಕೆ ಆನ್‌ನಸಸರಿ ಇಂಪಾರ್ಟೆನ್ಸ್ ತರುತ್ತಿದ್ದೀರಿ ಎಂದು ?

ಶ್ರೀ ಎಚ್. ಡಿ. ದೇವೇಗೌಡ:—ಅಧ್ಯಕ್ಷರು ಇಲ್ಲಿ ಯಾರೆ ಹೆಸರನ್ನೂ ಎತ್ತಬಾರದೆಂದು ಹೇಳುತ್ತಿರುವುದನ್ನು ನಾನೂ ಕೂಡ ಅಕ್ಷರಶಃ ಒಪ್ಪುತ್ತೇನೆ. ಆದರೆ ಯಾವ ಸಂದರ್ಭದಲ್ಲಿ ವ್ಯಕ್ತಿಗಳ ಹೆಸರನ್ನು ಬಳಸಬೇಕಾಗುತ್ತದೆ ಎಂದರೆ ಇಂಥಾ ಒಂದು ಸಂಸ್ಥೆಗಳನ್ನು ಯಾವ ಒಬ್ಬ ವ್ಯಕ್ತಿ ಮ್ಯಾನೇಜ್ ಮಾಡುತ್ತಿದ್ದಾರೆ ಅವರು ಸರ್ಕಾರದ ಮೇಲೆ ತಮ್ಮ ಒಂದು ಪ್ರಭಾವ ಬೀರಿ ಅಲ್ಲಸಲ್ಲದ ವ್ಯವಹಾರಗಳು ನಡೆಯಂತಕ್ಕದ್ದು ಸಾರ್ವಜನಿಕರ ಗಮನಕ್ಕೆ ಬರಬೇಕಾದ್ದು ಅಗತ್ಯ ಎಂದು ಕಂಡಾಗ ಮಾತ್ರ ಹೆಸರನ್ನು ಹೇಳಬೇಕಾಗುತ್ತದೆ. ಹಿಂದೆ ಇದೇ ಸಂಸ್ಥೆಗೆ ಎಷ್ಟುಸಾರ್ತಿ ಸರ್ಕಾರದವರು ಗ್ರಾಂಟನ್ನು ನಿಲ್ಲಿಸಿದ್ದರು, ಇತ್ತೀಚೆಗೆ ಈ ಆಡಳಿತ ಪಕ್ಷ ಅಧಿಕಾರಕ್ಕೆ ಬಂದ ನಂತರ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂಬುದನ್ನೂ ಇನ್ನೂ ನಾವು ಏತ್ತಿಲ್ಲ, ಈ ರೀತಿಯಾಗಿ ಇನ್ನೂ ಅನೇಕ ವಿಚಾರಗಳು ಇದರಲ್ಲಿ ಅಡಗಿವೆ. ಇದಕ್ಕೆ ಪೂರಾ ಆಳವಾದ ಹಿನ್ನೆಲೆ ಇದೆ. ಅಲ್ಲಿ ನಡೆದಿರತಕ್ಕ ಅನ್ಯಾಯಗಳೇನು ಎಂಬುದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕಾದ್ದು ನಮ್ಮ ಆದ್ಯ ಕರ್ತವ್ಯ.

ಆದರೆ ಇಲ್ಲಿ ಮಾತೆತ್ತಿದರೆ ಮಾನ್ಯ ಸಚಿವರು ಕೆಲವು ರಾಜಕೀಯ ಮುಂಖಂಡರು ಆ ಹುಡುಗರಿಗೆ ಉಪವಾಸ ಸತ್ಯಾಗ್ರಹ ಮಾಡುವುದಕ್ಕೆ ಪ್ರಚೋದನೆ ಮಾಡಿದ್ದಾರೆಂದು ಒತ್ತಿ ಒತ್ತಿ ಹೇಳುತ್ತಿದ್ದಾರೆ. ಅದಕ್ಕೆ ಆಧಾರವೇನಿದೆ ಎಂದು ನಾನು ಪ್ರಶ್ನೆ ಮಾಡಲೇಬೇಕು ? ನಾನು ಬೇಕಾದರೆ ಪ್ರಮಾಣ ಮಾಡಿ ಹೇಳುತ್ತೇನೆ—ನಾನಾಗಲಿ, ಅಥವಾ ಶ್ರೀ ಕಾಗೋಡು ತಿಮ್ಮಪ್ಪನವರಾಗಲಿ ಅಥವಾ ಶ್ರೀ ಆರ್ಮೊಗಂ ಅವರಾಗಲೀ, ಇಲ್ಲವೇ ಶ್ರೀ ವಾಟಾಳ್ ನಾಗರಾಜ್ ಅವರಾಗಲಿ ಅಥವಾ ಶ್ರೀ ಎಂ. ಎಸ್. ಕೃಷ್ಣನ್ ಅವರಾಗಲೀ ಅಥವಾ ಬಂಗಾರಪ್ಪನವರಾಗಲಿ ಯಾರೂ ಅವರಿಗೆ ಅದಕ್ಕೆ ಉತ್ತೇಜನ ಕೊಟ್ಟಿಲ್ಲ. ಹಾಗಿದ್ದರೂ ಮಾನ್ಯ ಮಂತ್ರಿಗಳು ಮಾತೆತ್ತಿದರೆ ಕೆಲವು ರಾಜಕೀಯ ಮುಂಖಂಡರು ಅವರಿಗೆ ಪ್ರಚೋದನೆ ಮಾಡಿ ಉಪವಾಸ ಸತ್ಯಾಗ್ರಹ ಮಾಡುವುದಕ್ಕೆ ಅವಕಾಶಮಾಡಿದ್ದಾರೆಂದು ಹೇಳುವುದು ಅವರಿಗೆ ಸರ್ವಥಾ ಸರಿಯಾದ್ದಲ್ಲ. ಅವರು ಹಾಗೇ ಹೇಳಬಾರದು. ಇಲ್ಲವೆ ಸರ್ಕಾರದವರು ಒಂದು ತೀರ್ಮಾನ ಮಾಡಿ ಬರಲಿ—ಯಾರೇ ಬಂದರೂ ಇಲ್ಲಿ ವಿಧಾನಸೌಧದ ಮುಂದೆ ಸತ್ಯಾಗ್ರಹ ಮಾಡಿದರೆ ಅದಕ್ಕೆಲ್ಲಾ ವಿರೋಧ ಪಕ್ಷದವರೇ

ಕಾರಣ ಎಂದರೆ ; ಯಾವ ಒಂದು ಆಧಾರವೂ ಇಲ್ಲದೆ ಅವರು ಹೀಗೆಲ್ಲಾ ಬಾಯಿಗೆ ಬಂದಂತೆ ಮಾತನಾಡುವುದು ಸರಿಯಲ್ಲ. ಇಲ್ಲಿ ಇರತಕ್ಕ ಆ ಒಕ್ಕಲಿಗರಲ್ಲಿ ಅಥವಾ ಕುಪ್ಪಸ್ವಾಮಿ ಅವರಾಗಲಿ ಯಾವ ಪಾರ್ಟಿಗೂ ಸೇರಿದವರಲ್ಲ. ಇನ್ನು ಆ ಕಡೆಯಾಳಿದ್ದರೆ ಅವರು ಆಡಳಿತ ಪಕ್ಷಕ್ಕೆ ಸೇರಿದವರು ಅವರು ಹಾಗಿರುವಾಗ ಅವರು ಹೀಗೆಲ್ಲಾ ಆಪಾದನೆ ಮಾಡಬಾರದು.

SRI H. M. CHANNABASAPPA —The Hon, Leader of the Opposition has raised a point under Rule 312. Rule 312 reads thus.

> "312. A member who wishes to bring to the notice of the Assembly any matter which is not a point of order shall give notice to the Secretary in writing stating briefly the point which he wishes to raise in the Assembly together with reasons for wishing to raise it and he shall be permitted to raise it only after the Speaker has given his consent and at such time and date as the Speaker may fix."

Now the point raised by Sri Devegowda is covered by Rule 312. You were kind enough to permit him to make out a case. It does not mean that immediately the point is raised, Government should have reply to his point. Government should have sufficient time to take note of the points raised by the Leader of the Opposition. Morever you have not given your consent to raise this matter. You cannot expect the Government to make a statement immediately the point is raised the point raised by the Leader of the Opposition has been taken note of and will make a statement at the appropriate time.

MADAM SPEAKER.—I agree with the hon. Minister

ಶ್ರೀ ಎಮ್. ಎಸ್. ಕೃಷ್ಣನ್—ಅಧ್ಯಕ್ಷರೇ..... .....

ಅಧ್ಯಕ್ಷರು.— ತಾವು ದಯಮಾಡಿ ಕುಳಿತುಕೊಳ್ಳಿ. ಶ್ರೀಮಾನ್ ದೇವೇಗೌಡರು ಇನ್ನೂ ಈ ವಿಚಾರದಲ್ಲಿ ನೋಟೀಸನ್ನು ಕೊಟ್ಟಿಲ್ಲ. ಆದರೆ ಅಲ್ಲಿ ಮಕ್ಕಳು ಉಪವಾಸ ಮಾಡುತ್ತಿದ್ದಾರೆಂಬ ವಿಚಾರವನು. ಕೇಳಿ ನಾನೇ ಅದನ್ನು ತಪ್ಪಿಸುವುದಕ್ಕೇನಾದರೂ ಅವಕಾಶವಿದೆಯೇ ? ಇದ್ದರೆ ಅದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡೋಣ ಎಂದೂ ಆ ವಿಚಾರದಲ್ಲಿ ಸರ್ಕಾರದವರು ಏನಾದರೂ ಹೇಳುತ್ತಾರೇನೊ ನೋಡೋಣ ಎಂದು ಇದರ ಪ್ರಸ್ತಾಪಕ್ಕೆ ಅವಕಾಶಕೊಟ್ಟೆ. ನಾಳೆ ಇದರ ಬಗ್ಗೆ ನೋಟೀಸ್ ಬಂದಾಗ ಚರ್ಚೆಗೆ ಅವಕಾಶ ಜಲ್ಲರಿಗೂ ಸಿಕ್ಕೇಸಿಕಂತ್ತದೆ. ಆಗ ನೋಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಇದರ ಬಗ್ಗೆ ಎರಡು ವಿಚಾರಗಳನ್ನು ತಿಳಿಸಬೇಕಾಗಿದೆ.....,

ಅಧ್ಯಕ್ಷರು.—ಹಾಗಾದರೆ ನಿಮಗೆ ಎರಡು ವಿಚಾರಗಳಿಗೆ, ತಿಮ್ಮಪ್ಪ ನವರಿಗೆ ಎರಡು ವಿಚಾರಗಳಿಗೆ ನಾಗರಾಜ್ ಅವರಿಗೆ ನಾಲ್ಕು ವಿಚಾರಗಳಿಗೆ ಹೀಗೆ ಎಲ್ಲರಿಗೂ ಎರಡೆರಡು ವಿಚಾರಗಳನ್ನು ಎತ್ತಲು ಅವಕಾಶ ಎಲ್ಲಿದೆ ? ಯಾವ ನಿಬಂಧನೆ ಪ್ರಕಾರ ?

ಶ್ರೀ ಎಂ. ಎಸ್. ಕೃಷ್ಣನ್—ನಾನು ಕಾಲ್ ಅಟೆನ್‌ಷನ್ ಬಗ್ಗೆ ಕೇಳುತ್ತಿಲ್ಲ.....

ಅಧ್ಯಕ್ಷರು.—ಮಾನ್ಯ ಸದಸ್ಯರು ಎಲ್ಲಾ ವಿಚಾರಗಳನ್ನು ತಿಳಿದಿದ್ದರೂ ಹೀಗೆ ಸತಾಯಿಸುವುದು ಸರಿಕಾಣುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ. ನಾವು ಇಲ್ಲಿ ಎಷ್ಟು ಶಂಖ ಹೊಡೆದುಕೊಂಡರೂ ಅಷ್ಟೇ ?

ಶ್ರೀ ಎಂ. ಎಸ್. ಕೃಷ್ಣನ್.—ಅವರು ಆ ಸಂಸ್ಥೆಯನ್ನು ಈಗ ಡೀರೆಕಗ್ನೈಜ್ ಮಾಡಿದ್ದಾರೆ, ಡೀರೆಕಗನೈಜ ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ, ಕಾಲೇಜಿಲ್ ಬೇಗ ಹಾಕಿದ್ದಾರೆ. ಇಂಥ ಪರಿಸ್ಥಿತಿ ಇದೆ. ಇದನ್ನು ನೋಡಿ ತಕ್ಷ ವ್ಯವಸ್ಥೆ ತತ್‌ಕ್ಷಣ ಮಾಡಬೇಕ ಅನ್ಯಾಯವಾಗಂತ ನೋಡಿಕೊಳ್ಳಬೇಕು. ಎರಡನೆಯದಾಗಿ ಯೂನಿವರ್ಸಿಟಿ ಇದನ್ನು ವಹಿಸಿಕೊಳ್ಳಬೇಕು. ಮೂರನೆಯದಾಗಿ ಡಾ ಶ್ರೀಧರ ಎಂಬುವವರನ್ನು ಟರ್ಮಿನೇಟ್ ಮಾಡಿರುವುದು ಸರಿಯಲ್ಲ. ರೀಇನಸ್ಟೇಟ್ ಮಾಡಬೇಕು. ಇದರ ಬಗ್ಗೆ ಸ್ಪಷ್ಟಮಾಡಬೇಕು. ಹಿಂದೆ ಮುಖ್ಯಮಂತ್ರಿಗಳು ಭೇರ್ಮನ್ ಆಗಿದ್ದರು ಈ ಮೂರು ಅತಿ ಮಂಖ್ಯವಾದ ಪ್ರಶ್ನೆಗಳು. ಇದಕ್ಕೆ ಕೂಡಲೆ ಗಮನಕೊಡಬೇಕು. ಇನ್ನೊಂದು ಅಂಶವಿದೆ ಡಾ ಶ್ರೀಧರ ಅಲ್ಲದ ಇನ್ನೂಬ್ಬರು ಸೆಕ್ರೆಟರಿ ಆಗಿದ್ದರು, ಅವರಮೇಲೆ ಅಪಾದನೆ ಇದೆ ಎಲ್ಲಾ ಪ್ರೋಬ ಮಾಡಿ, ಸಿ.ಐಎ. ಎಜೆಂಟ್ ಎಂದು ಮುಖ್ಯಮಂತ್ರಿಗಳು ಹೇಳಿದರು, ಇದು ಸರಿಯಲ್ಲ. ಇದೆಲ್ಲವನ್ನೂ ಪರಿತೀಲಿಸಿ ಒಂದ ಸ್ಟೇಟಮೆಂಟು ಕೊಡಬೇಕು. ನನ್ನ ಕಾಲ ಅಟೆನಷನ್ ನೋಟೀಸಿಗೆ ಎಂದು ಎತ್ತರ ಬರುವುದು ?

ಅಧ್ಯಕ್ಷರು.—೧೪ನೆಯ ತಾರೀಖು ಎಂದು ಹೇಳಿದ್ದಾರೆ.

Eighth Report of the Committee on Private Members Bills and Resolutions presentation

SRI B. P. KADAM.—(DEPUTY SPEAKER) —I beg to present the Eighth Report of the Committee on Private Members' Bills and Resolutions.

MEDAM SPEAKER.—The Reports is Presented

SRI H. MARE GOWDA.—(Nelamangala) I beg to move if that this Assembly agrees with the Eighth Report of the Committee on Private Member 's Bills and Resolutions.

The motion was adopted.

CHARITABLE ENDOWMENTS (MYSORE AMENDMENTS) BILL 1973 INTRODUCTION

SRI D. K NAICKER.—(Minisiter for low and Parliamentary Affiairs (On behalf of the Education Minister Sri A. R. Badri Narayan), I Beg to introduce the Charitable Endowments (Mysore Amendment) Bill, 1973.

MADAM SPEAKER.—In The Bill is introduced. The Bill is Reproduced On Annexhre to intifwer.

Speckers' s Rulnies on a Quistioes of Prisibese Agaisy Sri L. G, Hovanoor Charnan, Mysore Beeckward Claoses PORNIMENTY IS LAGE

ಶ್ರೀ ಎಸ್. ಎಂ. ಶೀರನಳ್ಳಿ ಚಂದ್ರಶೇಖರ್ (ಹೊಸನಗರ) ನಾನು ಒಂದು ಹಕ್ಕುಭಾಧ್ಯತೆ ನಿರ್ಣಯವನ್ನು ಹಿಂದುಳಿದ ವರ್ಗಗಳ ಆಯೋಗದ ಮೇಲೆ ಕಳುಹಿಸಿದ್ದೆ. ಕಳುಹಿಸಿ ೧೫ ದಿವಸದ ಮೆಲಾಯಿತ್ತು. ಆದೇನಾಯ್ತೋ ತಿಳಿಯಲಿಲ್ಲ.